ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED
Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – APRIL/MAY 2026

## KANNADA - IV SEMESTER BCA

## 25BCA41K: ಗಣಕ ಕನ್ನಡ IV

**Time: 3 Hours.** **Max. Marks: 80**

**I. ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (200 ಪದಗಳಿಗೆ ಮೀರದಂತೆ)** 3x10=30

1. ಕಪಿನಪ್ಪನ ವ್ಯಕ್ತಿತ್ವವನ್ನು ಕುರಿತು ವಿಶ್ಲೇಷಿಸಿ.
2. ಸಮಾಸ ಎಂದರೇನು? ಅವುಗಳಲ್ಲಿ ಯಾವುದಾದರೂ ಐದು ಸಮಾಸಗಳನ್ನು ಉದಾಹರಣೆಯೊಂದಿಗೆ ವಿವರಿಸಿ.
3. ಬೋಜಮ್ಮ, ದಗ್ಗೀರಜ್ಜ ಮತ್ತು ಹಕ್ಕಿಗಳ ಸಂಬಂಧ ಕುರಿತು ಬರೆಯಿರಿ.
4. ವಾಗಕ್ಷರ ತಂತ್ರಾಂಶದ ಪರಿಚಯದೊಂದಿಗೆ ಅದರ ಇತಿ–ಮಿತಿಗಳನ್ನು ವಿವರಿಸಿ.

**II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (100 ಪದಗಳಿಗೆ ಮೀರದಂತೆ)** 4x5=20

1. ಶ್ಯಾಮನು ಹೇಳುವ ಕನ್ನಡಕಗಳ ವಿಶೇಷತೆಯನ್ನು ಕುರಿತು ಬರೆಯಿರಿ.
2. ಲಿಜ್ಜತ್ ಪಾಪಡ್ ಕಂಪನಿಯು ಬೆಳೆದು ಬಂದ ದಾರಿಯನ್ನು ನಿರೂಪಿಸಿ.
3. ಭಾವುರಾಯರು ಹರಿಣಾಬಾಯಿಯನ್ನು ಮದುವೆಯಾಗಲು ಹೊರಟಾಗ ಎದುರಾದ ಕಷ್ಟಗಳನ್ನು ವಿವರಿಸಿ.
4. ಲಿಜ್ಜತ್ ಪಾಪಡ್ ತನ್ನ ಉತ್ಪನ್ನಗಳ ಗುಣಮಟ್ಟ ನಿರ್ವಹಣೆ ಮಾಡುವ ರೀತಿ ಹೇಗೆ? ವಿವರಿಸಿ.
5. ಭಾವುರಾಯರು ಸಂತೆಗೆ ಹೋದಾಗ ಆದ ಅನುಭವಗಳನ್ನು ಕುರಿತು ಬರೆಯಿರಿ.
6. 'ವಿಜ್ಞಾನ ಸಾಹಿತ್ಯದ ಅನುವಾದಗಳ ವೈವಿಧ್ಯ' ಕುರಿತು ವಿವರಿಸಿ.

**III. ಕೆಳಕಂಡ ಕಂಡಿಕೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿ.** 1x5=5

ತಾವು ದುಡಿದ ಹಣ ಮಹಿಳೆಯರಲ್ಲಿ ಮೂಡಿಸುವ ಆತ್ಮವಿಶ್ವಾಸ ವಿಶಿಷ್ಟವಾದದ್ದು. ಬೇರೆ ಯಾವ ತೃಪ್ತಿಯು ಇದಕ್ಕೆ ಸಾಟಿಯಾಗಲಾರದು ಮೂರು–ನಾಲ್ಕು ತಿಂಗಳಲ್ಲೇ ನೂರಕ್ಕೂ ಹೆಚ್ಚು ಮಹಿಳೆಯರು ಸೇರಿಕೊಂಡರು. ಶಾಖೆಗಳು ಹೆಚ್ಚುತ್ತಾ ಹೋದವು. ಮೊದಲ ವರ್ಷ ಆರು ಸಾವಿರಕ್ಕೂ ಅಧಿಕ ವ್ಯವಹಾರವಾಯಿತು ಎಷ್ಟೋ ಮಂದಿ ಹೆಣ್ಣು ಮಕ್ಕಳು ಶಾಲೆಯ, ಕಾಲೇಜಿನ ಅವಧಿ ಮುಗಿಸಿ ಹಪ್ಪಳ ಮಾಡುತ್ತಿದ್ದರು.

**IV. ಕಂಪನಿಯೊಂದರ ಅಸಿಸ್ಟಂಟ್ ಮ್ಯಾನೇಜರ್ ಹುದ್ದೆಗಾಗಿ ಅಭ್ಯರ್ಥನ ಪತ್ರ ಬರೆಯಿರಿ.** 1x5=5

**V. ಕೆಳಕಂಡ ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ.** 1x5=5

ಯುಗಾದಿ ಹಬ್ಬದ ಸಡಗರ

ST. FRANCIS DE SALES COLLEGE · EFFICIENCY · TRANSFORMATION · ELECTRONICS CITY, BENGALURU

**VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ.** 1x5=5

ರವಿಯ ಅತ್ತೆಯ ಮಗಳು ಗೌರಿ ತುಂಬಾ ಸುಂದರವಾಗಿರುತ್ತಾಳೆ. ಅವಳನ್ನು ಕಂಡರೆ ರವಿಗೂ ಇಷ್ಟ. ಆದರೆ ಅತ್ತೆಯ ಬೊಂಬಾಯಿ ಬಾಯಿಗೆ ಹೆದರಿ ನಿರಾಕರಿಸುತ್ತಾನೆ. ಹೆಚ್ಚಿನ ಓದಿಗಾಗಿ ನಗರಕ್ಕೆ ಬಂದ ರವಿ ಅಲ್ಲಿ ತನ್ನ ಸಹಪಾಠಿ ಸುಧಾಳನ್ನು ಪ್ರೀತಿಸಿ ಮದುವೆಯಾಗುತ್ತಾನೆ. ಹಾಗಾಗಿ ಅಪ್ಪ, ಚಿಕ್ಕಪ್ಪ ಮತ್ತು ಊರಿನ ಸಂಬಂಧವನ್ನು ಕಳೆದುಕೊಳ್ಳುತ್ತಾನೆ. ತನ್ನ ಮನೆಯವರ ಕೋಪಕ್ಕೆ ಗುರಿಯಾಗಿ ಮನೆಯವರಿಂದ ದೂರ ಉಳಿಯಬೇಕಾಗುತ್ತದೆ. ಅಪ್ಪನು ರೋಗಕ್ಕೆ ತುತ್ತಾಗಿ ಹಾಸಿಗೆ ಹಿಡಿದು ಆಸ್ಪತ್ರೆ ಸೇರಿದ ಸಂದರ್ಭದಲ್ಲಿ ಅಪ್ಪನನ್ನು ಕಾಣಲು ಬಂದ ರವಿಯು ತನ್ನ ಅತ್ತೆ ಹಾಗೂ ಚಿಕ್ಕಪ್ಪನನ್ನು ಎದುರಿಸಬೇಕಾಗುತ್ತದೆ. ಅತ್ತೆಯ ಬೈಗುಳ ಹಾಗೂ ಅಪ್ಪ ಮತ್ತು ಚಿಕ್ಕಪ್ಪನ ಪಶ್ಚಾತ್ತಾಪದ ಮಾತುಗಳು ರವಿ ಮನಸ್ಸನ್ನು ನಿರ್ಮಲಗೊಳಿಸುತ್ತವೆ. ಆಸ್ಪತ್ರೆಯ ಆವರಣದಲ್ಲಿ ಅತ್ತೆಯ ವೇದನೆಯ ಮಾತುಗಳು ಹಳೆಯದನ್ನು ಮೆಲುಕು ಹಾಕುವಂತೆ ಮಾಡುತ್ತವೆ.

**VII. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** 10x1=10

1. ಕಪಿನಪ್ಪನಿಗೆ ಎಷ್ಟು ಜನ ಮಕ್ಕಳಿದ್ದರು?

   ಅ. 5 ಆ. 6 ಇ. 7 ಈ. 8

2. ಶ್ಯಾಮ ಕನ್ನಡ ಎಲ್ಲಿ ದೊರೆಯುತ್ತದೆ ಎಂದು ಹೇಳಿದನು?

   ಅ. ಮನೆ ಆ. ಶಾಲೆ ಇ. ಗುಡಿ ಈ. ಸಂತೆ

3. "ಕೈಮುಗಿ" ಇದು ಯಾವ ಸಮಾಸ ಪದವಾಗಿದೆ?

   ಅ. ತತ್ಪುರುಷ ಸಮಾಸ ಆ. ಕ್ರಿಯಾ ಸಮಾಸ ಇ. ದ್ವಿಗು ಸಮಾಸ ಈ. ಅಂಶಿ ಸಮಾಸ

4. 'ಲಿಜ್ಜತ್' ಎಂದರೆ.........?

   ಅ. ಪಾಪಡ್ ಆ. ಸಿಹಿ ಇ. ಖಾರ ಈ. ರುಚಿಕರ

5. ರೂಪೇಶ್ ಯಾವ ದೇಶದಲ್ಲಿ ವಾಸಿಸುತ್ತಿದ್ದ?

   ಅ. ಭಾರತ ಆ. ಅಮೆರಿಕ ಇ. ಜಪಾನ್ ಈ. ಜರ್ಮನಿ

6. ಚಾಳೀಸು ಲೇಖನದ ಕರ್ತೃ ಯಾರು?

   ಅ. ಎಸ್. ಗಂಗಾಧರಯ್ಯ ಆ. ಶ್ರೀಪಡ್ರೆ ಇ. ದೀಪಾ ಈ. ಡಾ. ಬಾಲಚಂದ್ರ ಜಯಶೆಟ್ಟಿ

7. ಸೇಡಿಯಾಪು ತಂತ್ರಾಂಶ ರೂಪಿಸಿದವರು ಯಾರು?

   ಅ. ಶೇಷಾದ್ರಿ ಆ. ಕೆ.ಪಿ. ರಾವ್ ಇ. ಪ್ರಸನ್ನ ಈ. ಕಗಪ

8. ಭಾವುರಾಯರ ತಮ್ಮನ ಹೆಸರೇನು?

   ಅ. ರಾಮಸ್ವಾಮಿ ಆ. ರಘುನಾಥಾಚಾರ ಇ. ರಂಗನಾಥ ಈ. ಎನ್. ವಿ. ಅಯ್ಯಂಗಾರ್

9. "ಅಕೇಷಿಯ ಅರೇಬಿಕ" ಮರ ಯಾವುದು?

   ಅ. ಬೇವಿನ ಮರ ಆ. ಕರಿ ಜಾಲಿಮರ ಇ. ಅಶೋಕ ಮರ ಈ. ಹುಣಸೇಮರ

10. "ನಾಗಣ್ಣನ ಕನ್ನಡಕ" ಕವಿತೆ ಬರೆದವರು ಯಾರು?

    ಅ. ಪಂಜೆ ಮಂಗೇಶರಾಯ ಆ. ಪುಟ್ಟಪ್ಪ ಇ. ಚದುರಂಗ ಈ. ನಿರಂಜನ

**********

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY, BENGALURU